೨) ಇಲ್ಲ.

೩) ಕಳೆದ ಮೂರು-ನಾಲ್ಕು ವರ್ಷಗಳ ಅಭಾವ ಪರಿಸ್ಥಿತಿಯಿಂದಾಗಿ ಬಹಳಷ್ಟು ಸಣ್ಣ ಮತ್ತು ಅತೀ ಸಣ್ಣ ರೈತರನ್ನು ಒಳಗೊಂಡಂತೆ ಅವರಿಂದ ಸಾಲ ಮರುಪಾವತಿ ಮಾಡಲು ಸಾಧ್ಯವಾಗಿಲ್ಲ. ಆದರೆ ಅನೇಕ ಪ್ರಕರಣಗಳಲ್ಲಿ ಅಲ್ಪಾವಧಿ ಸಾಲವನ್ನು ಮಧ್ಯಮಾವಧಿ ಸಾಲವನ್ನಾಗಿ ಪರಿವರ್ತಿಸಲಾಗಿದೆ ಮತ್ತು ದೀರ್ಘಾವಧಿ ಸಾಲವನ್ನು ಪುನರ್ ನಿಗದೀಕರಣಗೊಳಿಸಲಾಗಿದೆ.

೪) ಸಹಕಾರ ಸಂಸ್ಥೆಗಳಿಗೆ ಬಾಕಿ ಇರುವ ಯಾವುದೇ ಸಾಲಗಳನ್ನು ಮನ್ನಾ ಮಾಡುವ ಯೋಚನೆ ಇರುವುದಿಲ್ಲ.

ಸಹ್ಯಾದ್ರಿ ಸಹಕಾರಿ ನೂಲಿನ ಗಿರಣಿ ನಿಯಂಮಿತ

೯೯೨ (೧). ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಹ್ಯಾದ್ರಿ ಸಹಕಾರ ನೂಲಿನ ಗಿರಣಿ ನಿಯಮಿತ ಚನ್ನಗಿರಿ ಇದು ಸ್ಥಾಪನೆಯಾಗಿದೆಯೆ ?

ಆ) ಹಾಗಿದ್ದಲ್ಲಿ ಸದಸ್ಯರಿಂದ ಸಂಗ್ರಹಿಸಲಾದ ಷೇರು ಹಣ ಎಷ್ಟು ?

ಇ) ಈ ನೂಲಿನ ಗಿರಣಿಯು ಈಗ ಕಾರ್ಯ ರೂಪಕ್ಕೆ ಬಂದಿದೆಯೆ ?

ಈ) ಈ ನೂಲಿನ ಗಿರಣಿಗೆ ಸರ್ಕಾರ ಮೂಲ ಬಂಡವಾಳ ತೊಡಗಿಸಿದೆಯೆ ?

ಉ) ಕರ್ನಾಟಕ ರಾಜ್ಯದಲ್ಲಿ ಒಟ್ಟು ಎಷ್ಟು ನೂಲಿನ ಗಿರಣಿಗಳಿವೆ ಮತ್ತು ಆ ನೂಲಿನ ಗಿರಣಿಗಳಿಗೆ ಸರ್ಕಾರ ತೊಡಗಿಸಿರುವ ಬಂಡವಾಳ ಎಷ್ಟೆಷ್ಟು ?

ಊ) ರಾಜ್ಯದ ಸಹಕಾರ ನೂಲಿನ ಗಿರಣಿಗಳು ಯಾವುವು ? ಎಷ್ಟೆಷ್ಟು ಸದಸ್ಯರಿಂದ ಮೂಲ ಬಂಡವಾಳವನ್ನು ಸಂಗ್ರಹಿಸಿದೆ ?

ಶ್ರೀ ಆರ್ ಎಲ್, ಜಾಲಪ್ಪ (ಸಹಕಾರ ಮಂತ್ರಿಗಳು).—

ಅ) ಈ ಗಿರಣಿಯು ನೋಂದಣಿಯಾಗಿದೆ.

ಆ) ೩೦.೫೯ ಲಕ್ಷ ರೂ.ಗಳು ದಿನಾಂಕ ೧೫-೨-೧೯೮೭ ಕ್ಕೆ ಇದ್ದಂತೆ.

ಇ) ಇಲ್ಲ.

ಈ) ಇಲ್ಲ.

ಉ) ಕರ್ನಾಟಕ ರಾಜ್ಯದಲ್ಲಿ ಒಟ್ಟು ೧೮ ನೋಂದಾಯಿತ ನೂಲಿನ ಗಿರಣಿಗಳಿವೆ. ಸರ್ಕಾರ ೧೧ ಗಿರಣಿಗಳಲ್ಲಿ ತೊಡಗಿಸಿರುವ ಒಟ್ಟು ಬಂಡವಾಳ ರೂ. ೨೯೯೧.೭೮ ಲಕ್ಷ ರೂ. ಗಳಾಗಿವೆ.

ಊ) ನೋಂದಾಯಿತ ಗಿರಣಿಗಳೂ ಹಾಗೂ ಮೂಲ ಬಂಡವಾಳ ತಾಪತಿಸಿದ ಸದಸ್ಯರ ಸಂಖ್ಯೆಯನ್ನು ಪ್ರತ್ಯೇಕ ತಃಖ್ತೆಯಲ್ಲಿ ವಿವರಿಸಲಾಗಿದೆ. ಅನುಬಂಧ 'ಎ'

ಕರ್ನಾಟಕ ಭೂ ಸುಧಾರಣೆ ಕಾಯ್ದೆಯ ೭೯ (ಎ) ಕಲಮಿನ ಮೇರೆಗೆ ವರಮಾನ ಮಿತಿಯ ಹೆಚ್ಚಳ

೯೫೯(೧). ಕೆ.ಎಸ್. ಕೋಳಿವಾಡ್ (ರಾಣೆಬೆನ್ನೂರು).—ಮಾನ್ಯ ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಭೂ ಸುಧಾರಣಾ ಕಾಯಿದೆಯ ಕಾಲಂ ೭೯ (ಎ) ನಲ್ಲಿರುವಂತೆ ಕೃಷಿಯೇತರ ಆದಾಯದ ಮಿತಿಯನ್ನು ಹೆಚ್ಚಿಸಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಎಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು).—

ಅ) ಹೆಚ್ಚಿಸಿಲ್ಲ.

ಆ) ಉದ್ಭವಿಸುವುದಿಲ್ಲ.

ನಂಜನಗೂಡಿನಲ್ಲಿ ಇ. ಎಸ್. ಐ. ಆಸ್ಪತ್ರೆಯ ನಿರ್ಮಾಣ

೭೬೧(ಬಿ). ಡಿ. ಟಿ. ಜಯಕುಮಾರ್(ನಂಜನಗೂಡು).—ಮಾನ್ಯ ಕಂದಾಯ, ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನಂಜನಗೂಡಿನಲ್ಲಿ ನಿರ್ಮಾಣ ಹಂತದಲ್ಲಿರುವ ಇ. ಎಸ್. ಐ. ಆಸ್ಪತ್ರೆಯ ಅಂದಾಜು ವೆಚ್ಚ ಎಷ್ಟು ?

ಆ) ಈ ಕೆಲಸ ಯಾವಾಗ ಪೂರ್ತಿಗೊಳ್ಳುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು).—

ಅ) ೧. ಚಿಕಿತ್ಸಾಲಯ ಮತ್ತು ವಸತಿ ಗೃಹಗಳು ರೂ. ೩೩.೪೪ ಲಕ್ಷಗಳು
೨. ಸ್ಥಳೀಯ ಕಛೇರಿ ರೂ. ೪.೨೫ ಲಕ್ಷಗಳು

ಒಟ್ಟು ರೂ. ೩೭.೬೯ ಲಕ್ಷಗಳು

ಆ) ೧. ಚಿಕಿತ್ಸಾಲಯ ಮತ್ತು ವಸತಿ ಗೃಹಗಳು ದಿನಾಂಕ ೨೭-೧೨-೧೯೮೮ರ ವೇಳೆಗೆ
೨. ಸ್ಥಳೀಯ ಕಛೇರಿ ದಿನಾಂಕ ೨೧-೨-೧೯೮೭ರ ವೇಳೆಗೆ.

ಮಾರ್ಜಿನ್ ಮನಿ ಯೋಜನೆಯಡಿಯಲ್ಲಿ ಆರ್ಥಿಕ ನೆರವು

೧೩೭೮. ಶ್ರೀ ಜಿ. ರಾಮದಾಸ್ (ಹೊಸದುರ್ಗ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ನಿಗಮದಿಂದ ೧೯೮೬-೮೭ನೇ ಸಾಲಿನಲ್ಲಿ ಮಾರ್ಜಿನ್ ಮನಿ ಯೋಜನೆಯಲ್ಲಿ ಹೊಸದುರ್ಗ ತಾಲ್ಲೂಕಿನ ಎಷ್ಟು ಫಲಾನುಭವಿಗಳಿಗೆ ಆರ್ಥಿಕ ನೆರವು ನೀಡಲಾಗಿದೆ ಹಾಗೂ ಯಾವ ಬ್ಯಾಂಕಿನ ಮೂಲಕ ಯಾವ ಯಾವ ಬಾಬಿಗೆ ಸಾಲ ಕೊಡಲಾಗಿದೆ.

ಆ) ಚಿತ್ರದುರ್ಗ ಜಿಲ್ಲೆಗೆ ಈ ಯೋಜನೆಗಾಗಿ ೧೯೮೬-೮೭ರಲ್ಲಿ ಎಷ್ಟು ಫಲಾನುಭವಿಗಳಿಗೆ ಎಷ್ಟು ಹಣವನ್ನು ಯಾವ ಯಾವ ತಾಲ್ಲೂಕುಗಳಿಗೆ ನೀಡಲಾಗಿದೆ. ಇದಕ್ಕೆ ನೀಡಿರುವ ಸಬ್ಸಿಡಿ ನೆರವು ಎಷ್ಟು, ಬ್ಯಾಂಕುಗಳು ನೀಡಿರುವ ಸಾಲವೆಷ್ಟು, ಎಷ್ಟು ಕಸಬುದಾರರಿಗೆ ಹಂಚಲಾಗಿದೆ.

ಇ) ೧೯೮೭-೮೮ನೇ ಸಾಲಿಗಾಗಿ (ಈ ಅಲಾವಿ ನಿಗದಿಪಡಿಸಿರುವ) ಯೋಜನೆಯಲ್ಲಿ ಎಷ್ಟು ಮಂದಿಗೆ ಎಷ್ಟು ಹಣ ನೀಡಲಾಗುವುದು, ಈ ಸಾಲಿನಲ್ಲಿ ಹೊಸದುರ್ಗ ತಾಲ್ಲೂಕಿನಲ್ಲಿ ಎಷ್ಟು ಫಲಾನುಭವಿಗಳನ್ನು ಗುರುತಿಸಲಾಗುವುದು ?

ಈ) ಮೇಲಿನ ನಿಗಮವು ಮುಂದಿನ ಸಾಲಿನಲ್ಲಿ ಚಿತ್ರದುರ್ಗ ಫಲಾನುಭವಿಗಳಿಗೆ ಹಮ್ಮಿಕೊಂಡಿರುವ ಕಾರ್ಯಕ್ರಮಗಳಾವುವು ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ೧೭೯ ಫಲಾನುಭವಿಗಳು. (ವಿವರಗಳನ್ನು ಅನುಬಂಧ 'ಅ' ಮತ್ತು 'ಆ'ರಲ್ಲಿ ಕೊಡಲಾಗಿದೆ)

ಆ) ೯೦೧ ಫಲಾನುಭವಿಗಳು. (ವಿವರಗಳನ್ನು ಅನುಬಂಧ 'ಇ'ರಲ್ಲಿ ಕೊಡಲಾಗಿದೆ.